**ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ**

ದಿನಾಂಕ : 30-07-2018

**ವರದಿ**

# ಯುವ ಸಮೂಹಕ್ಕೆ ಮಾರಕ ಡ್ರಗ್ಸ್

ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಕಾರ್ಯಾಗಾರ ಉದ್ಘಾಟಿಸಿ – ಶ್ರೀ ಎಸ್ ಜೆ ಕೃಷ್ಣ

ಕೊಳ್ಳೇಗಾಲ : ಜೂನ್ 30 : ಮಾದಕ ವಸ್ತುಗಳ ಸೇವನೆಯ ಮೋಹಕ್ಕೆ ಒಳಗಾಗುತ್ತಿರುವವರಲ್ಲಿ ಯುವ ಸಮೂಹವೇ ಹೆಚ್ಚಿರುವುದು ಆತಂಕಕಾರಿ ವಿಷಯವಾಗಿದೆ. ವಿಶ್ವದಲ್ಲಿ ಭಾರತವೇ ಯುವ ಸಮೂಹವನ್ನು ಹೆಚ್ಚಿನ ಸಂಖ್ಯೆಯಲ್ಲಿ ಹೊಂದಿದ್ದು ಯುವ ಸಮೂಹವೇ ಡ್ರಗ್ಸ್ ಸೆಳೆತಕ್ಕೆ ಒಳಗಾಗುತ್ತಿರುವುದು ದುರದೃಷ್ಟಕರ ಎಂದು ಗೌರವಾನ್ವಿತ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರಾದ ಶ್ರೀ ಎಸ್ ಜೆ ಕೃಷ್ಣರವರು ಅಭಿಪ್ರಾಯಿಸಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ "ಮಹಿಳೆಯರ ಲೈಂಗಿಕ ಕಿರುಕುಳ ನಿವಾರಣಾ ಸಮಿತಿ" ವತಿಯಿಂದ ತಾಲ್ಲೋಕು ಕಾನೂನು ಸೇವೆಗಳ ಸಮಿತಿ ಮತ್ತು ತಾಲ್ಲೋಕು ವಕೀಲರ ಸಂಘಗಳ ಆಶ್ರಯದಲ್ಲಿ ಆಯೋಜಿಸಿದ್ದ "ಮಹಿಳೆ – ಕಾನೂನು ಮತ್ತು ಪರಿಹಾರ" ಎಂಬ ವಿಷಯದ ಮೇಲೆ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

ಯುವ ಸಮೂಹ ಮಾದಕ ವಸ್ತುಗಳ ವ್ಯಸನಿಗಳಾಗಿ ದಾರಿ ತಪ್ಪುತ್ತಿದ್ದಾರೆ. ತಮ್ಮ ಗುರಿ ತಲುಪಲು ದುಶ್ಚಟಗಳು ಅಡ್ಡಿಯಾಗದಂತೆ ಎಚ್ಚರದಿಂದಿರಬೇಕು. ಡ್ರಗ್ಸ್ ಗಳಿಂದಾಗುವ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವ ಜವಾಬ್ದಾರಿ ಎಲ್ಲರ ಮೇಲಿದ್ದು ಕಾನೂನು ಮಾತ್ರವೇ ನಿಯಂತ್ರಿಸಲಾಗದು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಪ್ರೊ. ಉಮೇಶ್ ಸಂವಿಧಾನ ಮತ್ತು ಕಾನೂನಿನ ಅಡಿಯಲ್ಲಿ ಮಹಿಳೆಯರಿಗಾಗಿ ನೀಡಿರುವ ಹಕ್ಕು ಮತ್ತು ಸ್ವತಂತ್ರಗಳನ್ನು ಬಳಸಿಕೊಳ್ಳುವಲ್ಲಿ ಮಹಿಳೆಯರು ಇನ್ನೂ ಸಫಲರಾಗಿಲ್ಲ. ಮನೆ ಹಾಗೂ ಮನಗಳೆರಡನ್ನು ಬೆಳಗಿ ಸಂಸಾರದ ಎಲ್ಲಾ ಜವಾಬ್ದಾರಿಗಳನ್ನು ನಿರ್ವಹಿಸುವ ಮಹಿಳೆಯರೇ ದೌರ್ಜನ್ಯಕ್ಕೊಳಗಾಗುತ್ತಿರುವುದು ದುರ್ದೈವ. ಮಹಿಳೆಯರ ಮೇಲಾಗುವ ಎಲ್ಲ ರೀತಿಯ ದೌರ್ಜನ್ಯಗಳನ್ನು ತಡೆಗಟ್ಟಲು ಕಾನೂನಿನಡಿಯಲ್ಲಿರುವ ಅಂಶಗಳ ಬಗ್ಗೆ ಅರಿವು ಮೂಡಿಸಲು ಇಂತಹ ಕಾರ್ಯಕ್ರಮಗಳು ಸಹಕಾರಿಯಾಗುತ್ತವೆ ಎಂದು ತಿಳಿಸಿದರು.

"ಮಾದಕವಸ್ತುಗಳ ದುಷ್ಪರಿಣಾಮಗಳ ಜಾಗೃತಿ" ಎಂಬ ವಿಷಯದ ಮೇಲೆ ಉಪನ್ಯಾಸ ನೀಡಿದ ಹಿರಿಯ ವಕೀಲರಾದ ಶ್ರೀ ರಾಧಾಕೃಷ್ಣರವರು ಮಾದಕ ವಸ್ತುಗಳು ಇಂದು ಬಹಳ ಸುಲಭವಾಗಿ ಯುವ ಸಮೂಹಕ್ಕೆ ಸಿಗುತ್ತಿರುವುದು ಆರೋಗ್ಯಕರ ಬೆಳವಣಿಗೆಯಲ್ಲ. ಯುವ ಸಮೂಹವು ಮಾದಕ ವಸ್ತುಗಳಿಂದ ತಮ್ಮ ಭವಿಷ್ಯವನ್ನೇ ಹಾಳು ಮಾಡಿಕೊಳ್ಳುತ್ತಿರುವುದನ್ನು ನಾವು ಜಾಗೃತಿ ಮೂಡಿಸುವ ಮೂಲಕ ತಡೆಯಬೇಕಿದೆ. ಕಾನೂನು ಕಟ್ಟಳೆಗಳು ಮಾತ್ರವೇ ಇದನ್ನು ನಿಯಂತ್ರಿಸಲಾರವು. ಸಂಘ ಸಂಸ್ಥೆಗಳು, ಸಾರ್ವಜನಿಕರು ಸ್ವಯಂಪ್ರೇರಿತರಾಗಿ ಕೈ ಜೋಡಿಸಿದಾಗ ಇದು ಸಾಧ್ಯ ಎಂದು ಕರೆ ನೀಡಿದರು.

"ಮಹಿಳೆ – ಕಾನೂನು ಮತ್ತು ಪರಿಹಾರ" ಎಂಬ ವಿಷಯದ ಮೇಲೆ ವಿಶೇಷ ಉಪನ್ಯಾಸ ನೀಡುತ್ತ ಶ್ರೀ ವೆಂಕಟಾಚಲ, ಅಧ್ಯಕ್ಷರು, ಭಾರತ್ ವಿಕಾಸ್ ಪರಿಷತ್, ಕೊಳ್ಳೇಗಾಲ ರವರು ಮಹಿಳೆ ಇಂದು ಅಬಲೆಯಲ್ಲ ಬದಲಾಗಿ ಆಕೆ ಸಬಲೆ, ಪುರುಷರಿಗಿಂತ ಕಡಿಮೆಯಿಲ್ಲ ಎನ್ನುವ ಸತ್ಯವನ್ನು ಇಂದು ಆಕೆ ಎಲ್ಲಾ ಕ್ಷೇತ್ರಗಳಲ್ಲಿ ನಿರೂಪಿಸಿದ್ದಾಳೆ. ಆದರೂ ಕೆಲಸದ ಸ್ಥಳಗಳಲ್ಲಾಗುವ ಲೈಂಗಿಕ ದೌರ್ಜನ್ಯಗಳು, ವರದಕ್ಷಿಣೆ, ಅತ್ಯಾಚಾರ, ಹೆಣ್ಣುಮಕ್ಕಳ ಸಾಗಾಣಿಕೆ, ಕೌಟುಂಬಿಕ ಹಿಂಸೆ, ಬಾಲ್ಯ ವಿವಾಹ, ಹೀಗೆ ಎಲ್ಲ ರೀತಿಯಲ್ಲೂ

ಮಹಿಳೆಯರೇ ದೌರ್ಜನ್ಯಕ್ಕೆ ಒಳಗಾಗುತ್ತಿರುವುದು ವಿಪರ್ಯಾಸವೇ ಸರಿ. ಮಹಿಳೆ ತಾನು ಬರೀ ಬೋಗದ ವಸ್ತುವಲ್ಲ ಎಂಬುದನ್ನು ತಿಳಿಯಪಡಿಸಿ ಧೈರ್ಯದಿಂದ ದೌರ್ಜನ್ಯಗಳನ್ನು ಎದುರಿಸುವ ಪ್ರವೃತ್ತಿ ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು.

ವೇದಿಕೆಯಲ್ಲಿ ಶ್ರೀ ಎಂ ನಾಗೇಶ್, ಶ್ರೀ ಡಿ. ಎಸ್ ಬಸವರಾಜು, ಶ್ರೀ ಎನ್ ಬಸವರಾಜು, ಶ್ರೀಮತಿ ನಿರ್ಮಲ ಮಧುಸೂಧನ್, ಶ್ರೀಮತಿ ಕೆ ಆರ್ ಉಮಾದೇವಿರವರು ಉಪಸ್ಥಿತರಿದ್ದರು.

ವಿದ್ಯಾರ್ಥಿನಿಯರಿಗೆ ಸ್ವಾಸ್ಥ ಸಂಕಲ್ಪದ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಕು. ಶೀಲಾ ಆರ್ ಸ್ವಾಗತಿಸಿ, ಕು. ಪವಿತ್ರ ಎಂ ವಂದಿಸಿದರು.

+++++

"ಮಹಿಳೆಯರ ಲೈಂಗಿಕ ಕಿರುಕುಳ ನಿವಾರಣಾ ಸಮಿತಿ" ವತಿಯಿಂದ ತಾಲ್ಲೋಖು ಕಾನೂನು ಸೇವೆಗಳ ಸಮಿತಿ ಮತ್ತು ತಾಲ್ಲೋಖು ವಕೀಲರ ಸಂಘಗಳ ಆಶ್ರಯದಲ್ಲಿ "ಮಹಿಳೆ – ಕಾನೂನು ಮತ್ತು ಪರಿಹಾರ" ಎಂಬ ವಿಷಯದ ಮೇಲೆ ಕಾರ್ಯಾಗಾರ.

ಚಿತ್ರದಲ್ಲಿ ಶ್ರೀ ವೆಂಟಕಾಟಲ, ಶ್ರೀ ಎನ್ ಬಸವರಾಜು, ಶ್ರೀ ರಾಧಾಕೃಣ್ಣ, ಶ್ರೀ ಎಸ್ ಜೆ ಕೃಷ್ಣ, ಪ್ರಾಚಾರ್ಯ ಪ್ರೊ. ಉಮೇಶ, ಶ್ರೀ ಡಿ. ಎಂ ಬಸವರಾಜು, ಶ್ರೀಮತಿ ನಿರ್ಮಲ ಮಧುಸೂದನ್ ಹಾಗೂ ಶ್ರೀಮತಿ ಕೆ ಆರ್ ಉಮಾದೇವಿರವರನ್ನು ಕಾಣಬಹುದು.




"ಮಹಿಳೆಯರ ಲೈಂಗಿಕ ಕಿರುಕುಳ ನಿವಾರಣಾ ಸಮಿತಿ" ವತಿಯಿಂದ ತಾಲ್ಲೋಖು ಕಾನೂನು ಸೇವೆಗಳ ಸಮಿತಿ ಮತ್ತು ತಾಲ್ಲೋಖು ವಕೀಲರ ಸಂಘಗಳ ಆಶ್ರಯದಲ್ಲಿ "ಮಹಿಳೆ – ಕಾನೂನು ಮತ್ತು ಪರಿಹಾರ" ಎಂಬ ವಿಷಯದ ಮೇಲೆ ಕಾರ್ಯಾಗಾರವನ್ನು ಶ್ರೀ ಎಸ್ ಜೆ ಕೃಷ್ಣರವರು ಉದ್ಘಾಟಿಸಿದರು.

ಚಿತ್ರದಲ್ಲಿ ಶ್ರೀ ವೆಂಟಕಾಟಲ, ಶ್ರೀ ಎನ್ ಬಸವರಾಜು, ಶ್ರೀ ರಾಧಾಕೃಣ್ಣ, ಪ್ರಾಚಾರ್ಯ ಪ್ರೊ. ಉಮೇಶ, ಶ್ರೀ ಡಿ. ಎಂ ಬಸವರಾಜು, ಶ್ರೀಮತಿ ನಿರ್ಮಲ ಮಧುಸೂದನ್ ಹಾಗೂ ಶ್ರೀಮತಿ ಕೆ ಆರ್ ಉಮಾದೇವಿರವರನ್ನು ಕಾಣಬಹುದು.



“ಮಹಿಳೆಯರ ಲೈಂಗಿಕ ಕಿರುಕುಳ ನಿವಾರಣಾ  ಸಮಿತಿ” ವತಿಯಿಂದ ತಾಲ್ಲೋಖು ಕಾನೂನು ಸೇವೆಗಳ ಸಮಿತಿ ಮತ್ತು ತಾಲ್ಲೋಖು ವಕೀಲರ ಸಂಘಗಳ ಆಶ್ರಯದಲ್ಲಿ “ಮಹಿಳೆ – ಕಾನೂನು ಮತ್ತು ಪರಿಹಾರ” ಎಂಬ ವಿಷಯದ ಮೇಲೆ ಕಾರ್ಯಾಗಾರ.
ಪ್ರಾಚಾರ್ಯ ಪ್ರೊ. ಉಮೇಶರವರು ಮಾತನಾಡುತ್ತಿರುವುದು.

ಚಿತ್ರದಲ್ಲಿ ಶ್ರೀ ವೆಂಟಕಾಟಲ, ಶ್ರೀ ಎನ್ ಬಸವರಾಜು,  ಶ್ರೀ ರಾಧಾಕೃಣ್ಣ, ಶ್ರೀ ಎಸ್ ಜೆ ಕೃಷ್ಣ,  ಶ್ರೀ ಡಿ. ಎಂ ಬಸವರಾಜು, ಶ್ರೀಮತಿ ನಿರ್ಮಲ ಮಧುಸೂದನ್ ಹಾಗೂ ಶ್ರೀಮತಿ ಕೆ ಆರ್ ಉಮಾದೇವಿರವರನ್ನು ಕಾಣಬಹುದು.




ಕಾರ್ಯಾಗಾರದಲ್ಲಿ ಭಾಗವಹಿಸಿದ ಅಧ್ಯಾಪಕರು ಹಾಗೂ ವಿದ್ಯಾರ್ಥಿನಿಯರುಗಳು



ವಿದ್ಯಾರ್ಥಿನಿಯರಿಗೆ ಸ್ವಾಸ್ಥ ಸಂಕಲ್ಪದ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

